ಕರ್ನಾಟಕ ವಿಧಾನ ಸಭೆ

ಶುಕ್ರವಾರ 12ನೇ ಸೆಪ್ಟೆಂಬರ್ 1997ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ: 10-20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು: ಮಾನ್ಯ ರೋಷನ್ ಬೇಗ್ ಅವರ ಕ್ಷೇತ್ರದಲ್ಲಿ ಮಳೆ ಜಾಸ್ತಿ ಬಂದು ಕೆಲವು ಮನೆಗಳು ಕೊಚ್ಚಿಹೋಗಿವೆಯೆಂದು, ಅಲ್ಲಿ ಹೋಗಿ ನೋಡಿಕೊಂಡು ಬರುತ್ತೇನೆಂದು ಅವರು ನನ್ನ ಅನುಮತಿಯನ್ನು ಪಡೆದುಕೊಂಡು ಹೋಗಿದ್ದಾರೆ.

(1) ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ರವರು ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ದಂತ ಚೋರ ವೀರಪ್ಪನ್ ಸಹಚರರಾದ ಅರ್ಜುನ್, ಆಯ್ಯನ್‌ದೊರೈ ಮತ್ತು ರಂಗಸ್ವಾಮಿ ಇವರುಗಳ ಸಾವಿನ ಬಗ್ಗೆ ಶ್ರೀ ಎನ್.ಎನ್.ಸಂಗೊಳ್ಳಿ ವಿಚಾರಣಾ ವರದಿ ಹಾಗೂ ಮೆಮೊರಾಂಡಮ್‌ಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(2) ವರದಿಯನ್ನೊಪ್ಪಿಸುವುದು

ಶ್ರೀ ವಿ.ಎಸ್.ಕೌಜಲಗಿ (ಅರಭಾವಿ): ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಡಿಯಲ್ಲಿ ಬರುವ ನವದೆಹಲಿಯ ಕರ್ನಾಟಕ ಭವನದ ಕಾರ್ಯವೈಫಲ್ಯತೆಯ ಬಗ್ಗೆ ಸಮಿತಿಯು ತನ್ನ 31ನೇ ವರದಿಯನ್ನು ಈಗ ನಾನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.